ಕರ್ನಾಟಕ ಸರ್ಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾವೇರಿ ಭವನ, ಬೆಂಗಳೂರು,
ದಿನಾಂಕ: 10.05.2015

**ಸಂ.ಗ್ರಾಅಪ 41 ಗ್ರಾನೀಸ (8), ಬೆಂಗಳೂರು ದಿನಾಂಕ: 10.06.2015**

**ಅಧಿಕೃತ ಜ್ಞಾಪನ**

ವಿಷಯ:- 2013-14ನೇ ಸಾಲಿನಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಅಳವಡಿಸಲಾದ ನೀರು ಶುದ್ಧೀಕರಣ ಘಟಕಗಳು ಅನುಪಯುಕ್ತವಾಗಿರುವ ಕುರಿತು

ಓದಲಾಗಿದೆ:- ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 86 ಗ್ರಾನೀಸ (5)2013(ಭಾಗ-1), ದಿನಾಂಕ 22.10.2013

2013-14ನೇ ಸಾಲಿಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಆರ್ಸೆನಿಕ್, ಅಧಿಕ ಫ್ಲೋರೈಡ್ ಹಾಗೂ ಮತ್ತಿತರ ರಾಸಾಯನಿಕ ಕಲುಷಿತೆಗಳಿಂದ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಗೊಳಗಾಗಿರುವ ಜನವಸತಿಗಳಲ್ಲಿ ಅನುಮೋದಿತ (R.O)ತಂತ್ರಜ್ಞಾನ ಹಾಗೂ ಮಾದರಿಯ ಕುಡಿಯುವ ನೀರಿನ ಶುದ್ಧೀಕರಣ ಘಟಕಗಳನ್ನು 20 ಆಯ್ದ ಜಿಲ್ಲೆಗಳಲ್ಲಿ ವಿವಿಧ ಸಾಮರ್ಥ್ಯದ 1000 ಶುದ್ಧೀಕರಣ ಘಟಕಗಳನ್ನು ಜನವಸತಿವಾರು ಅಳವಡಿಸುವ ಕುರಿತಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದ್ದು, ಈ ಪೈಕಿ ತುಮಕೂರು ಜಿಲ್ಲೆಗೆ 149 ಶುದ್ಧೀಕರಣ ಘಟಕಗಳನ್ನು ಮಂಜೂರು ಮಾಡಿದೆ.

2013-14ನೇ ಸಾಲಿಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಅಳವಡಿಸಲಾದ 70 ನೀರು ಶುದ್ಧೀಕರಣ ಘಟಕಗಳು ಉಪಯೋಗಕ್ಕೆ ಬಾರದೇ ಘಟಕಗಳು ಸ್ಥಗಿತಗೊಂಡಿದ್ದು, ಯೋಜನೆಯ ಪ್ರಯೋಜನವನ್ನು ಗ್ರಾಮೀಣ ಜನತೆಗೆ ಕಲ್ಪಿಸುವಲ್ಲಿ ಅಸಮರ್ಥವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ ಯೋಜನೆಯ ಉದ್ದೇಶವನ್ನು ಗ್ರಾಮೀಣ ಜನತೆಗೆ ಕಲ್ಪಿಸುವ ಹಿತದೃಷ್ಟಿಯಿಂದ ಸದರಿ ನೀರು ಶುದ್ಧೀಕರಣ ಘಟಕಗಳು ಉಪಯೋಗಕ್ಕೆ ಬಾರದೇ ಅನುಪಯುಕ್ತವಾಗಿರುವ ಕುರಿತಂತೆ ಸಮಗ್ರವಾಗಿ ತನಿಖೆ ನಡೆಸಲು ಈ ಕೆಳಗಿನ ತನಿಖಾ ತಂಡವನ್ನು ರಚಿಸಿದೆ.

ಮೇಲೆ ವಿವರಿಸಲಾದಂತೆ, ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ ಅಳವಡಿಸಲಾದ 70 ನೀರು ಶುದ್ಧೀಕರಣ ಘಟಕಗಳು ಉಪಯೋಗಕ್ಕೆ ಬಾರದೇ ಅನುಪಯುಕ್ತವಾಗಿರುವ ಕುರಿತು ಸಮಗ್ರವಾಗಿ ತನಿಖೆ ನಡೆಸಿ ಎರಡು ವಾರಗಳಲ್ಲಿ ವರದಿ ನೀಡುವಂತೆ ಆದೇಶಿಸಿದೆ.

| | | |
|---|---|---|
| 1 | ಶ್ರೀ ನದಾಫ್, ವ್ಯವಸ್ಥಾಪಕ ನಿರ್ದೇಶಕರು (ನಿವೃತ್ತ), ಎನ್.ಇ.ಕೆ.ಆರ್.ಟಿ.ಸಿ | ಕಾರ್ಯದರ್ಶಿ |
| 2 | ಶ್ರೀ ರಾಯ್ಕರ್, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಳಗಾವಿ | ಸದಸ್ಯ ಕಾರ್ಯದರ್ಶಿ |
| 3 | ಡಾ: ಸಿದ್ದರಾಮಯ್ಯ, ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ | ಸದಸ್ಯರು |

(ಬಿ.ಕೃಷ್ಣಪ್ಪ)
ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಬೆಂಗಳೂರು

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬೆಳಗಾವಿ, ಚಿಕ್ಕಬಳ್ಳಾಪುರ ಮತ್ತು ತುಮಕೂರು
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕಾವೇರಿ ಭವನ, ಬೆಂಗಳೂರು,
3. ಸಂಬಂಧಪಟ್ಟ ತನಿಖಾ ಸಮಿತಿ ಸದಸ್ಯರುಗಳಿಗೆ
4. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್)ರವರ ಆಪ್ತ ಕಾರ್ಯದರ್ಶಿಗಳು, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ
4. ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ರವರ ಅಪ್ತ ಕಾರ್ಯದರ್ಶಿ, ಕಾವೇರಿ ಭವನ, ಬೆಂಗಳೂರು.